# ದಲಿತ ಲೇಖಕರ ನಿಲುವು

# Dalitha Lekkkara Niluvu

**Dr. K Anjanappa**
Associate Professor,
Dept of Kannada,
Tunga Mahavidyalaya,
Thirthahalli, Shivamogga Dist.,
Karnataka State.

ಸ್ವಾತಂತ್ರ್ಯ ಆನಂತರದ ದಿನಗಳಲ್ಲಿ ಬ್ರಿಟೀಷ್ ಸಾಮ್ರಾಜ್ಯಶಾಹಿ ಹಿಡಿತದಿಂದ ಮುಕ್ತಿ ಹೊಂದಿದ ಭಾರತವನ್ನು ಸಮಾಜದ ಕೆಲವೇ ಶಕ್ತಿಗಳು ಆಡಳಿತ ನಡೆಸುವುದನ್ನು ಕಂಡು ಅಕ್ಷರಸ್ಥ ದಲಿತರು ಹಿಂದೂ ಸಮಾಜವನ್ನು ತಮ್ಮ ಅನುಭವದ ಗ್ರಹಿಕೆಯಲ್ಲಿ ಚಿಂತಿಸ ತೊಡಗಿದರು. ಇದಕ್ಕೆ ಮೂಲ ಪ್ರೇರಣೆಯಾಗಿ ಸಾಮಾನ್ಯರ ಬಗ್ಗೆ ಅತ್ಯಂತ ಕಳಕಳಿಯಿಂದ ದಲಿತಪರ ವಾದ ನಿಲುವುಗಳನ್ನು ಹೊಂದಿದ್ದ ಬುದ್ಧ, ಬಸವ, ಅಂಬೇಡ್ಕರ್, ಗಾಂಧೀಯವರ ವಿಚಾರಧಾರೆಗಳು ಕಾರಣವಾದವು. ಸಾಮಾಜಿಕ ವ್ಯವಸ್ಥೆಯ ಗುಲಾಮಗಿರಿಯಿಂದ ಸಿಡಿದೇಳುವ, ಹೋರಾಡುವ ಹಂಬಲ ವ್ಯಕ್ತ ಪಡಿಸಿದರು. ರಾಷ್ಟ್ರಾದ್ಯಂತ ಅನೇಕ ಚಳುವಳಿಗಳು ಆರಂಭವಾದವು. ಪಂಜಾಬ್, ಬಂಗಾಲ, ಕೇರಳ, ತಮಿಳುನಾಡು, ಆಂಧ್ರ, ಮಹಾರಾಷ್ಟ್ರಗಳಲ್ಲಿ ಉಂಟಾದ ದಲಿತಪರ ಚಳುವಳಿಗಳು ಕರ್ನಾಟಕದ ವಿವಿಧ ಸ್ಥಳಗಳಲ್ಲಿ ವಾಸಿಸುತ್ತಿದ್ದ ದಲಿತ ಬುದ್ಧಿಜೀವಿಗಳ ಮೇಲೆ ಪ್ರಭಾವಿತವಾದವು.

'ದಲಿತ' ಪದದ ಅರ್ಥ ಹಾಗೂ ವ್ಯಾಪ್ತಿಯನ್ನು ಗುರುತಿಸುವುದಾದರೆ ನೋವಿಗೆ ಒಳಗಾದ, ದಮನಕ್ಕೆ ಗುರಿಯಾದ, ಅಸ್ಪೃಶ್ಯತೆಯನ್ನೊಳಗೊಂಡ ಶೋಷಿತ ಎಂಬ ನಾನಾರ್ಥಗಳು ಬಳಕೆಯಾಗಿವೆ. ವಿಶಾಲಾರ್ಥದಲ್ಲಿ ಶೋಷಣೆಗೆ ಒಳಗಾದ ಎಲ್ಲಾ ಜಾತಿಯ ಬಡವರು ದಲಿತರೆಂದು ಕರೆಯಬಹುದಾದರೂ, ಸಾಮಾಜಿಕವಾಗಿ ಆರ್ಥಿಕವಾಗಿ ಶತಮಾನಗಳಿಂದ ಶೋಷಣೆಗೆ ಕ್ರೌರ್ಯಕ್ಕೆ ಬಲಿಯಾದ ಜನತೆಯೇ ದಲಿತರು. ಇಂತಹ ಪರಿಸರದಿಂದ ಬಂದ ಪ್ರಜ್ಞಾವಂತರು ಬರೆದ ಸಾಹಿತ್ಯವೇ ದಲಿತ ಸಾಹಿತ್ಯ. ದಲಿತ ವರ್ಗದಿಂದ ಬಂದ ಲೇಖಕ ತನ್ನ ಅನುಭವಗಳನ್ನು, ಆಶಯಗಳನ್ನು ಸುಖ ದುಃಖಗಳನ್ನು ಬವಣೆಗಳನ್ನು ಹೆಚ್ಚು ವಸ್ತು ನಿಷ್ಠವಾಗಿ ಹೇಳಲು ಸಾಧ್ಯವಾಗುತ್ತದೆ. ಬಂಡಾಯ ಮನೋಭಾವದ ಶತಮಾನಗಳಿಂದ ಶೋಷಣೆಗೆ ಒಳಗಾದ ಅಸ್ಪೃಶ್ಯ ಜನಾಂಗದಲ್ಲಿ ಹುಟ್ಟಿ ಬೆಳೆದು ಆ ನೋವು ಯಾತನೆಗೆ ಕಾರಣವಾದ ವ್ಯವಸ್ಥೆಯನ್ನು ವಿರೋಧಿಸುತ್ತ ಸೈದ್ಧಾಂತಿಕವಾದ ನೆಲೆಯಲ್ಲಿ ಸಂಘಟನಾತ್ಮಕವಾಗಿ ಹೋರಾಡಿ ಸಮಾನತೆಗಾಗಿ ಹಾತೊರೆಯುವ ಬರಹಗಾರ ದಲಿತ ಸಾಹಿತಿಯಾಗುತ್ತಾನೆ ತನ್ನ ಜನಾಂಗದ ಮೌಢ್ಯವನ್ನು ಚಿತ್ರಿಸುವುದರ ಜೊತೆಗೆ ಅವರ ಶ್ರೇಯಸ್ಸನ್ನು ಬಯಸಿ ಅವರನ್ನು ತಿದ್ದುವ ಹೊಸ ಬೆಳಕಿನತ್ತ ಕರೆದೊಯ್ಯುವ ಮುಖವಾಣಿಯಾಗುತ್ತಾನೆ.

ಕನ್ನಡ ಸಾಹಿತ್ಯ ಸಂದರ್ಭದಲ್ಲಿ ದಲಿತ ಪರವಾದ ನಿಲುವುಗಳನ್ನೊಳಗೊಂಡ ಅಂಶಗಳನ್ನು ಗುರುತಿಸಬಹುದು. ಕನ್ನಡದ ಆದಿಕವಿ ಪಂಪ ತನ್ನ ಕೃತಿಯಲ್ಲಿ ಮೀಂಗುಲಿಗನಾದ ಕರ್ಣನ ಪಾತ್ರ ಚಿತ್ರಣದ ಹಿನ್ನೆಲೆಯಲ್ಲಿ 'ಮನುಷ್ಯ ಕುಲಂ ತಾನೊಂದೆ ವಲಂ' ಎಂದಿರುವುದು ಜಾತಿ ಬಗೆಗಿನ ಸಮಾನತೆಯ ಪ್ರಗತಿಪರವಾದ ನಿಲುವಾಗಿದೆ. ಆನಂತರ ಬಂದ ವಿವಿಧ ವರ್ಗದ ವಚನಕಾರರು ಜಾತಿ, ಮತ, ಪಂಥ, ಭಾಷೆ, ಲಿಂಗ, ಭೇದಗಳನ್ನು ಹರಿದೊಗೆದು ಒಂದೇ ವೇದಿಕೆಯ ಮೇಲೆ ಸಮಾನತೆಗಾಗಿ ಹಾತೊರೆದದ್ದು ಅವಿಸ್ಮರಣೀಯ. ದಾಸರು ಹಾಡುಗಳ ಮೂಲಕ ಪಾಮರರ ಮನಸ್ಸಿಗೆ ನಾಟುವ ಹಾಗೆ ಸಾಮಾಜಿಕ ವಿಡಂಬನೆ. ಮಡಿವಂತಿಕೆ ಬಗೆಗೆ ಎಚ್ಚರಿಸಿ "ಮಾನವರೆಲ್ಲಾ ಒಂದೇ" ಎಂಬುದಾಗಿ ಸಾರಿದರು. ಕೆಳವರ್ಗದಿಂದ

ಬಂದ ಕನಕದಾಸರು ಅಕ್ಕಿ ರಾಗಿಯಂತಹ ಧಾನ್ಯಗಳ ಮೂಲಕ ವರ್ಗ – ಸಂಘರ್ಷವನ್ನು ಬಿಚ್ಚಿ ತೋರಿಸಿ 'ರಾಮಧ್ಯಾನ ಚರಿತ್ರೆ' ಎನ್ನುವ ದಲಿತಪರ ಆಶಯಗಳನ್ನೊಳಗೊಂಡ ಕೃತಿ ಬರೆದು, ಸಮಾನತೆ ತರಲು ಪ್ರಯತ್ನಿಸಿದರು.

ಆಧುನಿಕ ಕನ್ನಡ ಸಾಹಿತ್ಯವನ್ನು ನವೋದಯ, ಪ್ರಗತಿಶೀಲ, ನವ್ಯ, ನವ್ಯೋತ್ತರ ಬಂಡಾಯ, ದಲಿತ ಎಂಬುದಾಗಿ ವಿಂಗಡಿಸಬಹುದು, ನವೋದಯ ಮತ್ತು ನವ್ಯ ಪಂಥಗಳು ವಿದೇಶಿ ಸಾಹಿತ್ಯದ ಪ್ರಭಾವದಿಂದ ಹುಟ್ಟಿದವುಗಳಾದರೆ ನವ್ಯೋತ್ತರದ ದಲಿತ ಬಂಡಾಯ ಚಳುವಳಿಗಳು ಈ ನೆಲದ ಅನಿವಾರ್ಯತೆಯಿಂದ ಹುಟ್ಟಿಕೊಂಡವುಗಳಾಗಿವೆ. ನವೋದಯ ಲೇಖಕರು ಪರಂಪರಾಗತ ಮೌಲ್ಯಗಳನ್ನು ಒಪ್ಪಿಕೊಂಡು ದೇವರು, ಧರ್ಮ, ಪ್ರಕೃತಿ, ನಾಡು–ನುಡಿಗಳ ಅಭಿಮಾನ ಕಲ್ಪಕತೆ, ಆದರ್ಶಪ್ರಿಯತೆಯಂತಹ ವಿಚಾರಗಳ ಬಗೆಗೆ ಭಾವಾವೇಶದಿಂದ ಬರೆದರು. ದಲಿತರ ಸಮಸ್ಯೆಗಳನ್ನು ಕುರಿತ ಹಾಗೆ ಕಂಡು ಕೇಳಿ ಅನುಕಂಪ, ಸಹಾನುಭೂತಿ ಮಾನವೀಯತೆಯ ಕಾಳಜಿಯಿಂದ ದಲಿತ ಪ್ರಜ್ಞೆಯನ್ನು ತಮ್ಮ ಕೃತಿಗಳಲ್ಲಿ ಚಿತ್ರಿಸಿದ ಕುವೆಂಪು, ಕಾರಂತ, ಬೇಂದ್ರೆ ಗೋರೂರು, ಚದುರಂಗ ಮೊದಲಾದ ಲೇಖಕರು ದಲಿತ ಸಮಸ್ಯೆಗಳನ್ನು ಹೊಸ ನೋಟಗಳಲ್ಲಿ ಕಂಡುಕೊಂಡರು. ಪ್ರಗತಿಶೀಲ ಲೇಖಕರು ಮಾರ್ಕ್ಸ್‌ವಾದದ ಪ್ರೇರಣೆಯಿಂದ ಸಾಮಾಜಿಕ ನ್ಯಾಯ ದೊರಕಿಸಲು ಬಡತನ, ಭಿಕ್ಷಾಟನೆ, ವೇಶ್ಯಾವೃತ್ತಿ ಮೂಢನಂಬಿಕೆ ಕಂದಾಚಾರಗಳಂತಹ ಸಮಸ್ಯೆಗಳನ್ನು ಯಾವುದೇ ಭಾಷೆಯ ಮಡಿವಂತಿಕೆಯಿಲ್ಲದೆ ತಮ್ಮ ಸಂವೇದನೆಗಳಲ್ಲಿ ಅಭಿವ್ಯಕ್ತಿಸಿದರು. ದಂತಗೋಪುರಗಳಲ್ಲಿ ಕುಳಿತು ಸಾಹಿತ್ಯ ರಚನೆ ಮಾಡುತ್ತಿದ್ದ ನವ್ಯ ಲೇಖಕರು ಭಾಷೆಯ ತಂತ್ರಗಾರಿಕೆಯನ್ನು ಅಳವಡಿಸಿಕೊಂಡು ತಮ್ಮ ಸಾಹಿತ್ಯದಲ್ಲಿ ರೂಪಕ, ಪ್ರತಿಮೆ ಸಂಕೇತಗಳನ್ನು ಬಳಸಿ ಸಂಕೀರ್ಣತೆಯಿಂದ ಸಾಮಾನ್ಯ ಓದುಗನಿಂದ ಸಾಹಿತ್ಯ ದೂರ ಉಳಿಯುವಂತಾಯಿತು. ಈ ಹಿನ್ನೆಲೆಯಲ್ಲಿ ನವ್ಯ ಸಾಹಿತ್ಯ ಅವಸಾನ ಸ್ಥಿತಿಯನ್ನು ಕಂಡುಕೊಂಡಿತು. ಎಪ್ಪತ್ತರ ದಶಕದಲ್ಲಿ ಹಲವಾರು ಯುವಕ ದಲಿತ ಪ್ರತಿಭಾವಂತರು ಮಾರ್ಕ್ಸ್, ಲೋಹಿಯಾ, ಅಂಬೇಡ್ಕರ್ ವಿಚಾರಧಾರೆಗಳಿಗೆ ಪ್ರಭಾವಿತರಾದರು. ಇವರೆಲ್ಲಾ ದಲಿತರ ಏಳಿಗೆಗಾಗಿ ಸ್ವ–ಸುಧಾರಣೆ, ಸ್ವಾವಲಂಬನೆ, ಸ್ವಾಭಿಮಾನ, ಸ್ವಪ್ರಯತ್ನ ಇವುಗಳನ್ನು ಬಲವಾಗಿ ಪ್ರತಿಪಾದಿಸಿದರು, 1973 ರಲ್ಲಿ ನಡೆದ ಬಸವಲಿಂಗಪ್ಪನವರ ಬೂಸಾ ಪ್ರಕರಣ, ಮೈಸೂರಿನಲ್ಲಿ ನಡದ ಜಾತಿ ವಿನಾಶ ಸಮ್ಮೇಳನ, 1974 ರಲ್ಲಿ ರಚಿಸಿಕೊಂಡ ಬರಹಗಾರರ ಮತ್ತು ಕಲಾವಿದರ ಒಕ್ಕೂಟ, ದಲಿತರಲ್ಲಿ ಉಂಟಾದ ಎಚ್ಚರದ ಪರಿಣಾಮವಾಗಿ ಭದ್ರಾವತಿಯಲ್ಲಿ ಪ್ರೊ॥ ಕೃಷ್ಣಪ್ಪನವರ ನೇತೃತ್ವದಲ್ಲಿ ರೂಪಿತವಾದ 'ದಲಿತ ಸಂಘರ್ಷ ಸಮಿತಿ' ದಲಿತರ ಮೇಲಾಗುವ ದೌರ್ಜನ್ಯದ ವಿರುದ್ಧ ಎತ್ತಿದ ಸ್ವರ ಅಸಾಧಾರಣವಾದುದು. ಅಕ್ಷರ ಕಲಿತ ಹಲವಾರು ದಲಿತ ಯುವಕರು ಸಂಘಟಿತರಾದರು. ಪರಿಣಾಮವಾಗಿ ದಲಿತ ವಿದ್ಯಾರ್ಥಿ ಒಕ್ಕೂಟ, ದಲಿತ ಮಹಿಳಾ ಒಕ್ಕೂಟ, ದಲಿತ ಕಲಾ ಮಂಡಳಿ, ದಲಿತ ನೌಕರರ ಒಕ್ಕೂಟ ಹೀಗೆ ಹತ್ತು ಹಲವು ಸಂಘಟನೆಗಳು ಹುಟ್ಟಿ ದಲಿತ ಲೇಖಕರಿಗೆ ಪುಷ್ಠಿ ಕೊಟ್ಟವು. 1975 ರ ಜೂನ್ 25 ರಂದು ಜಾರಿಗೆ ಬಂದ ತುರ್ತು ಪರಿಸ್ಥಿತಿ ಹೇರಿಕೆ, 1979 ರಲ್ಲಿ ಜರುಗಿದ ಧರ್ಮಸ್ಥಳದಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ ನೇತೃತ್ವದಲ್ಲಿ ನಡೆದ ಸಮ್ಮೇಳನದಲ್ಲಿ ದಲಿತರ ಲೇಖನಗಳನ್ನು ಓದಲು ಅವಕಾಶ ನೀಡಲು ನಿರಾಕರಿಸಿದ್ದರ ಫಲವಾಗಿ ಅದಕ್ಕೆ ಪರ್ಯಾಯವಾಗಿ ಬೆಂಗಳೂರಿನಲ್ಲಿ ನಡೆದ 'ದಲಿತ ಸಾಹಿತಿಗಳ ಸಮಾವೇಶ' ಈ ಎಲ್ಲಾ ಘಟನೆಗಳು ದಲಿತ ಲೇಖಕರಿಗೆ ಹಾಗೂ ಅವರ ಸಂವೇದನೆಗಳಿಗೆ ಸ್ಪಷ್ಟ ನಿಲುವು ಕಂಡುಕೊಳ್ಳಲು ಸಹಕಾರಿಯಾದವು.

ದಲಿತ ಲೇಖಕ ತನ್ನೆಲ್ಲಾ ಹಚ್ಚ ಹಸುರಿನ ಅನುಭವಕ್ಕೆ ಬಿಸಿಯಾದ ಅನಿಸಿಕೆಗಳೊಂದಿಗೆ ಆ ಜನಾಂಗದ ಅನುಭವಗಳನ್ನು ಒಂದೊಂದಾಗಿ ಪರಿಚಯಿಸುವ ಪ್ರಯತ್ನ ಮಾಡಿದರು. ದಲಿತನ ಭಾವನೆಗಳ ಬಡತನ ಸುಖ ದುಃಖ ದುಮ್ಮಾನಗಳ ಧಾರಿದ್ರ್ಯಗಳ ಅವರ ಆಸೆ ಆಕಾಂಕ್ಷೆಗಳ ಆಳಕ್ಕಿಳಿದು ಅವರ ನಾಡಿ ಬಡಿತದ ಸ್ವರವನ್ನು ಮೀಟುವುದು ಮುಖ್ಯವಾಗಿದೆ. ದಲಿತ ಲೇಖಕ ಸಂಪ್ರದಾಯ ಮುರಿಯುವ ಧೋರಣೆ ಹಾಗೂ ಹೊಸ ಅರಿವು ಮೂಡಿಸುವಂತಹ ಸಾಹಿತ್ಯದ ಅಗತ್ಯತೆ ಕುರಿತು ಅಭಿವ್ಯಕ್ತಿಸತೊಡಗಿದ. ತಮ್ಮ ಬದುಕು ಹಾಗು ಅದರ ಅಸ್ವಸ್ಥತೆ ಯಥಾವತ್ತಾಗಿ ಬಿಂಬಿಸಬೇಕೆಂಬ ಹಂಬಲದಿಂದ ಬೆರೆಯಲಾರಂಬಿಸಿದ. ತನ್ನ ಜನಾಂಗದ ದಟ್ಟ ದಾರಿದ್ರ್ಯ ಬದುಕಿನ ಚಿತ್ರಣಕ್ಕೆ ಹೆಚ್ಚು ಮಹತ್ವ ಕೊಟ್ಟಿದಲ್ಲದೆ ಅವರ ಅಸಹನೀಯವಾದ ಜೀವನ ಸಮಸ್ಯೆಗಳನ್ನು ಕಸಿವಿಸಿ, ಕಳವಳ, ವೇದನೆ, ವ್ಯಥೆಗಳನ್ನು ಅನಾವರಣಗೊಳಿಸಿದ. ಬಡತನ, ಅಜ್ಞಾನ, ಶೋಷಣೆ ಜೀವನ ವಿಧಾನ ಇವೇ ಮೊದಲಾದವುಗಳು ಆ ಲೇಖಕನ ಕೇಂದ್ರ ವಸ್ತುವಾದವು. ಶತಶತಮಾನಗಳಿಂದ ತಮ್ಮ ಜನಾಂಗದ ಮೇಲೆ ನಡೆಯುತ್ತಿದ್ದ ಅತ್ಯಾಚಾರ, ಅನ್ಯಾಯ, ದಬ್ಬಾಳಿಕೆ, ಅಸಮಾನತೆ, ಕ್ರೋಧ ಕ್ರೌರ್ಯಗಳೇ ತನ್ನ ಬರವಣಿಗೆಯ ಸಾಧನಗಳಾದವು. ಮೇಲ್ವರ್ಗದವರಿಗೆ ಮನದಟ್ಟಾಗುವಂತೆ ಅವರೂ ಮನುಷ್ಯರು, ಅವರಲ್ಲಿ ಹರಿಯುವುದು

ಒಂದೇ ರಕ್ತ. ದಲಿತರು ಬರುವರು ದಾರಿ ಬಿಡಿ ಎನ್ನುವ ಆರ್ಭಟ ಆಕ್ರೋಶದೊಂದಿಗೆ ಮನುಷ್ಯ – ಮನುಷ್ಯರ ಮಧ್ಯೆ ಪ್ರೀತಿಯ ಬೀಜವನ್ನು ಬಿತ್ತಿದರು. ದಲಿತ ಲೇಖಕ ಶೋಷಣೆರಹಿತ, ವರ್ಗರಹಿತ ಸಮಾಜಕ್ಕಾಗಿ ಹೋರಾಡಿ ಅಸಂಖ್ಯಾತ ದಲಿತರ ದನಿಯಾಗಿ ಸಾಹಿತ್ಯದ ಮೂಲಕ ಪ್ರತಿಭಟಿಸಿದ. ತುಳಿತಕ್ಕೊಳಗಾಗಿದ್ದ ಅಸ್ಪೃಶ್ಯರ ನೋವು, ಸಿಟ್ಟು, ದುರಂತ ಮೊದಲಾದವುಗಳನ್ನು ತಮ್ಮ ಸಾಹಿತ್ಯದ ಅರಂಭದಲ್ಲಿ ಸಾಹಿತ್ಯ ಪ್ರವೇಶಿಸಿದ ದಲಿತ ಕವಿ ಸಿದ್ಧಲಿಂಗಯ್ಯ "ಹೊಲೆ ಮಾದಿಗರ ಹಾಡು" ಕವನ ಸಂಕಲನದ ಮೂಲಕ ಆವೇಶಭರಿತವಾಗಿ ಬರವಣಿಗೆಯ ಕಲಾತ್ಮಕತೆಯಿಂದ ದೂರ ಉಳಿಯುವಂತಾಯಿತು. ಇಕ್ರಲಾ, ಪದೀರ್ಲ್ಲಾ ಈ ನನ್ನ ಮಕ್ಕಳ 'ಚರ್ಮ ಎಬ್ರಲಾ' ಎನ್ನುವ ಸಾಲುಗಳು ದಲಿತರ ದುರಂತಕ್ಕೆ ಕಾರಣವಾಗಿರುವ ವ್ಯವಸ್ಥೆಯ ವಿರುದ್ಧ ಸಿಟ್ಟು, ಆದನ್ನು ಧ್ವಂಸ ಮಾಡಿ ಬಿಡಬೇಕೆಂಬ ಅದಮ್ಯ ಉತ್ಸಾಹ, ತನ್ನವರ ಅಜ್ಞಾನ ಮತ್ತು ಹೆಡ್ಡತನಕ್ಕಾಗಿ ನೋವು, ಬೇಸರ ಇವೇ ಮುಂತಾದವುಗಳನ್ನು ಕಾಣುತ್ತೇವೆ. ಅನಂತರ ಬಂದ ಇವರ ಎರಡನೇ ಕವನ ಸಂಕಲನ "ಸಾವಿರಾರು ನದಿಗಳು?" ಮೊದಲನೆಯ ಸಂಕಲನದ ಮಿತಿಗಳನ್ನು ಮೀರಿ ಸಂಯಮಯುತವಾಗಿ ಸೃಜನಶೀಲ ಕಲಾತ್ಮಕ ಲೇಖಕನಾಗಿ ಗೋಚರಿಸುವ ಸ್ಪಷ್ಟ ಗುರುತುಗಳು ಇಲ್ಲಿವೆ. ಯಾವುದೇ ರೋಷ, ಆರ್ಭಟಗಳಿಲ್ಲದೆ ತನ್ನ ಜನಾಂಗದ ಬದುಕಿನ ವಿವರಗಳನ್ನು ಈ ಕವನದ ಸಾಲುಗಳು ಒಳಗೊಂಡಿವೆ. ಎಂ. ಗೋವಿಂದಯ್ಯ ಗುಣಾತ್ಮಕವಾದ. ಕವನಗಳನ್ನು ಬರೆದ ಮತ್ತೊಬ್ಬ ದಲಿತ ಲೇಖಕ. ತನ್ನ ಸಾಹಿತ್ಯದಲ್ಲಿ ದಲಿತ ಲೋಕದ ಒಳಗಿನ ವಿವರಗಳನ್ನು ಹಸಿಹಸಿಯಾಗಿ ಇವರಂತೆ ದಾಖಲಿಸಿದ, ಕವಿ ಮತ್ತೊಬ್ಬನಿರಲಾರ. ಇಂದೂದರ ಹೊನ್ನಾಪುರರ "ಬಂಡಾಯ" ಕವನ ಸಂಕಲನದಲ್ಲಿ ದಲಿತಾನುಭವ ರೋಷವಾಗಿ ಮಾರ್ಪಟ್ಟು ಹೆಪ್ಪುಗಟ್ಟಿ ನಿಂತಿದೆ. ದಲಿತ ಜಗತ್ತಿನ ಅನಿವಾರ್ಯಗಳಾದ ಇವೆಲ್ಲವು ಇಲ್ಲಿ ಅಭಿವ್ಯಕ್ತಿಸಲ್ಪಟ್ಟಿವೆ. ಮ.ನ. ಜವರಯ್ಯ ತಮ್ಮ ಕವಿತೆ ಕಾದಂಬರಿಗಳಲ್ಲಿ ವೈಚಾರಿಕ ಚೌಕಟ್ಟಿನೊಳಗೆ ಪ್ರಗತಿಪರ ಆಶಯದೊಂದಿಗೆ ದಲಿತ ಪರವಾದ ನಿಲುವುಗಳನ್ನು ಪ್ರಕಟಿಸಿದ್ದಾರೆ.

ಇವರ "ಮಾಗಿ" ಕಾದಂಬರಿ ದಲಿತ ಹೆಣ್ಣೊಬ್ಬಳನ್ನು ಕೇಂದ್ರವನ್ನಾಗಿಟ್ಟುಕೊಂಡು ಅವಳ, ಬದುಕಿನ ಸಂವೇದನೆಗಳನ್ನು, ವಿವಿಧ ಸ್ತರಗಳನ್ನು ಹಾಗೂ ತನ್ನ ಜಾತಿಯ ಗಂಡಿಗಿಂತಲೂ ಹೆಚ್ಚು ಶೋಷಣೆಗೆ ಗುರಿಯಾಗುವ ಸನ್ನಿವೇಶಗಳನ್ನು ದಾರುಣವಾಗಿ ಚಿತ್ರಿಸುತ್ತದೆ. ಡಾ॥ ಅರವಿಂದ ಮಾಲಗಿತ್ತಿ ಅವರ ಕಾರ್ಯ 'ದಲಿತ' ಸಂಸ್ಕೃತಿಯ ಆಚರಣೆಯಿಂದ 'ಬಂಗಾರವ್ವ' ಎನ್ನುವ ಹೆಣ್ಣು ಸತ್ತಾಗ ನಡೆಯುವ ಘಟನೆಗಳ ಸುತ್ತ ಹೆಣೆದ ಹಾಗೂ ಸಂಪ್ರದಾಯ ಎನ್ನುವುದು ಎಷ್ಟು ಕ್ರೂರವಾದದ್ದು ಎಂಬುದನ್ನು ವ್ಯಕ್ತಪಡಿಸುತ್ತದೆ. ದೇವನೂರು ಮಹಾದೇವ ಮುಖ್ಯ ದಲಿತ ಲೇಖಕ. ಈತ ಕಥೆ, ಕಾದಂಬರಿಗಳ ಮೂಲಕ ಹೊಸ ಸಾಹಿತ್ಯ ಸೃಷ್ಟಿಯ ನೇತಾರನಾಗಿ ಕನ್ನಡ ಸಾಹಿತ್ಯದಲ್ಲಿ ಹೊಸ ಅಲೆಯನ್ನೆಬ್ಬಿಸಿದ. ತನ್ನ ಪರಿಸರದ ಭಾಷೆಯಲ್ಲಿ ಕಲಾತ್ಮಕತೆಯನ್ನು ಕಂಡುಕೊಂಡರು. 'ದ್ಯಾವನೂರು' ಎನ್ನುವ ಕಥಾ ಸಂಕಲನದಲ್ಲಿ ದಲಿತರ ಜೀವನ ವಿಧಾನಗಳನ್ನು, ಬದುಕಿನ ವಿವಿಧ ಮಗ್ಗಲುಗಳನ್ನು ವಿವರಿಸುವುದರ ಜೊತೆಗೆ ಜಾತಿ ಸಂಘರ್ಷದೊಂದಿಗೆ ವರ್ಗ ಸಂಘರ್ಷದ ಕಲ್ಪನೆ ಕಟ್ಟಿಕೊಡುವ ಈ ಕಥೆಗಳು ಕನ್ನಡ ಸಾಹಿತ್ಯದಲ್ಲಿ ಅಪೂರ್ವವಾದವುಗಳಾಗಿವೆ. ಇವರ ಎಲ್ಲಾ ಕಥೆಗಳ ವಸ್ತು 'ಶೋಷಣೆ' ಯಾಗಿದೆ. ಇವರದೆ ಆದ ಒಡಲುಗಳ ದಲಿತ ಕುಟುಂಬವೊಂದರ ಆಸೆ ಆಕಾಂಕ್ಷೆಗಳ, ಕಲಹಗಳ ಪುಟ್ಟ ವಿಶ್ವವನ್ನೇ ನಮ್ಮ ಮುಂದಿಡುತ್ತದೆ. ಈ ಕಾದಂಬರಿಯ ನಾಯಕಿ ಸಾಕವ್ವ ದಲಿತ ಮಹಿಳಾ ವರ್ಗದ ಪ್ರತಿನಿಧಿಯಾಗಿ, ಸ್ವಾಭಿಮಾನದ ಮೂರ್ತಿಯಾಗಿ, ಪೊಲೀಸರ ದೌರ್ಜನ್ಯಕ್ಕೆ ತುತ್ತಾದ ಅಸಹಾಯಕ ಹೆಣ್ಣಾಗಿ ಹೊಸ ಬದುಕಿಗಾಗಿ ಹಂಬಲಿಸುತ್ತಾಳ. 'ಕುಸುಮಬಾಲೆ'ಯಲ್ಲಿ ಜೀತ ಪದ್ಧತಿ, ಬಡತನ, ಬದುಕಿನ ಬವಣೆಗಳನ್ನು ದಲಿತರ ಜೀವನ ವಿವರಗಳನ್ನು ಆಡು ಮಾತಿನ ರೂಪದಲ್ಲಿ ಆ ಜನಾಂಗದ ಸಂಸ್ಕೃತಿಯ ಸಮಗ್ರ ಚಿತ್ರಣವನ್ನು ಮಹಾದೇವ ಕೊಟ್ಟಿದ್ದಾರೆ, ಮಳ್ಳೂರು ನಾಗರಾಜ "ಮರಣ ಮಂಡಲ ಮಧ್ಯೆದೊಳಗೆ", ಎನ್ನುವ ಕಾದಂಬರಿಯಲ್ಲಿ ಸಮಕಾಲೀನ ಸಮಾಜದ ವಿಡಂಬನೆ, ವರ್ಣಸಂಕರದ, ದಲಿತರ ಹೊಸ ಬದುಕಿನ ಅನ್ವೇಷಣೆಗಾಗಿ ತುಡಿಯುವ ಅನನ್ಯ ಕೃತಿಯಾಗಿದೆ. ಈಗ ದಲಿತ ಲೇಖಕರ ಒಂದು ಪಟ್ಟಿಯಷ್ಟೆ ನೀಡಬಹುದು. ಬಿ. ಟಿ. ಲಲಿತನಾಯಕ, ಮುನಿವೆಂಕಟಪ್ಪ, ದೇವಯ್ಯ ಹರಪಿ, ಎಲ್. ಹನುಮಂತಯ್ಯ ಮೊದಲಾದವರು ದಲಿತರ ಅನುಭವಗಳನ್ನು ಕಲಾತ್ಮಕವಾಗಿ ತಮ್ಮ ಕೃತಿಗಳಲ್ಲಿ ವರ್ಣಿಸಿದ್ದಾರೆ.

ಒಟ್ಟಿನಲ್ಲಿ ದಲಿತ ಲೇಖಕ ಅಸಮಾನತೆಯ ವಿರುದ್ಧ ಪ್ರತಿಭಟನೆ ಸೂಚಿಸಿ ಶೋಷಣೆ ಮಾಡುವ ಜನತೆಯ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ. ದಲಿತ ಲೇಖಕ ತಾನು ಬರೆದ ಕೃತಿಯಿಂದ ಮತ್ತೊಂದು ಕೃತಿಗೆ ತನ್ನ ಸೃಜನಾತ್ಮಕ ಕ್ರಿಯೆಯಲ್ಲಿ ನಿರ್ದಿಷ್ಟವಾದ ಬದಲಾವಣೆಗಳನ್ನು ಗುರುತಿಸಿಕೊಂಡಿದ್ದರಿಂದ ಸ್ಪಷ್ಟವಾಗಿ ಈ ಲೇಖಕರ ನಿಲುವುಗಳ ಬಗೆಗೆ ಅಂತಿಮ ತೀರ್ಮಾನಗಳನ್ನು ಕೊಡಲು ಸಾಧ್ಯವಾಗುವುದಿಲ್ಲ. ದಲಿತ ಲೇಖಕ ತನ್ನ ಸ್ವಂತ ಬದುಕಿನ ಪರಿಧಿಯಾಚೆ ಚಿಂತಿಸುವ ಹಾಗು ತನ್ನದಲ್ಲದ್ದನ್ನು ಅಭಿವ್ಯಕ್ತಿಸುವ ಕಾರ್ಯದಲ್ಲಿ ತೊಡಗಿಸಿಕೊಂಡಿಲ್ಲ ಎಂಬುದು ಗಮನಾರ್ಹ ಅಂಶವಾಗಿದೆ.